# Kuvempu University

NAAC Accredited with "A" Grade
**Students' Supportive Service Centre**
**Students' Utility Complex, Jnana Sahyadri,**
**Shankaraghatta – 577 451, E-mail:kusssc@gmail.com**

## Foreign Students' Admission Process Revised Guide Lines

1) The foreign students those who want to seek admission in the University PG Departments/ Constituent Colleges / Affiliated Colleges for UG/ PG/ Ph.D/ Diploma and Certificate Courses have to download the 'Eligibility Assessment' and 'Admission Application Form' from University website.(kuvempu.ac.in) to confirm their eligibility.

2) The foreign students have to pay fee ₹.1000/- or 15 $ for 'Eligibility Assessment' process, in State Bank of India, Jnana Sahyadri Branch (A/C No. 54023036291, IFSC Code SBIN0040759). Payment details have to be mentioned in the 'Eligibility Assessment' and 'Application Form'. Receipt original copy to be enclosed. The foreign students have to submit the duly filled application to the Director International Students' Cell Kuvempu University, Shankaraghatta- 577 451

3) a) The Director, International Students' Cell (ISC) verifies the travel documents and academic records of the candidate and forwards the same to the Deputy Registrar (Academic) for the issue of 'Provisional Permission Letter'. Based on the recommendation/opinion of the Director, ISC, the Academic section issues the 'Provisional Permission Letter' to the candidate and send a copy of the same to the ISC.

In case of any ambiguity then the matter shall be placed before an equivalence committee comprising the concerned faculty Dean, School Director and the Dept. Chairman. Based on the recommendation of the committee the final decision will be intimated to the foreign student by the Academic section and the same shall be brought to the notice of ISC.

b) In case of foreign students seeking admission for Ph.D programme the Director, ISC, after verifying the travel documents and academic records forwards the same to the Deputy Registrar (Academic) to get the opinion of the concerned equivalence committee.

Further, the Academic section shall also get the opinion of the concerned Dept. Chairman about the vacancy position for Ph.D under a recognized guide in the Dept. Based on the recommendation of the committee and the consent letter from a recognized guide the Academic section issues the 'Provisional Permission Letter' to the foreign student and send a copy of the same to ISC.

4) In both the cases related to section (3) (a) and (b), if the candidate is eligible the Academic section directs the candidate to pay the following fee:
   i) Ph.D / P.G / UG / Diploma / Certificate course: Rs. 7000/- or $ 104.

After the confirmation of fee payment by the candidate the Academic section shall issue the 'Provisional Permission Letter to the candidate.

P.T.O

If the candidate is not-eligible the same shall be intimated to him/her by issuing a letter by the Academic section and the same shall be brought to the notice of ISC.

5) After procuring the 'Provisional Permission Letter' the foreign student/ research scholar shall approach the Indian Embassy of their country for Student Visa / Research Visa.

6) On the arrival to India the foreign student/ research scholar shall first report to the ISC and later approach the concerned PG Dept. / College and complete the admission formalities for the intended course and pay the following fee.

| | | | |
|---|---|---|---|
| i) | PG /Ph.D course | : Rs. 40,000/- or $ 600 | Per year |
| ii) | UG/Diploma/Certificate courses | : Rs. 10,000/- or $ 150 | |

The prescribed fees to be paid to University A/c (SBI, Janana Sahyadri, Branch).

7) After the admission process is complete the foreign student/ research scholar should take a 'Study Certificate' from the concerned PG Dept. / College and request the ISC for online registration to the FRRO and procure 'Form S' and 'Bonafide certificate'.

These documents are necessary for getting 'Stay Visa' or 'Residential Permit' from the FRRO, Dept. of Police. If the student avails the hostel facility then he/she shall also procure a 'Form C' form ISC. After getting the 'Residential permit' the student shall submit a copy of the same to ISC.

8) The Students' Supportive Service Centre, Kuvempu University will conduct 'Functional English' training programme for non English medium Foreign Students after admission.

9) Awareness Programme 'Law of the land' will be organised for foreign students by the Director International Students' Cell in association with Police department.

10) <u>Formats</u>
   a) Foreign Students' Eligibility Assessment Form
   b) Foreign Students Admission Application Form

Draft approved by the Registrar

6/9

DIRECTOR
International Students' Cell
Kuvempu University
SHANKARAGHATTA-577 451.
Dist. Shivamogga, Karnataka, INDIA

# ಕುವೆಂಪು ವಿಶ್ವವಿದ್ಯಾಲಯ

ನ್ಯಾಕ್‌ನಿಂದ 'ಎ' ಶ್ರೇಣಿ ಮಾನ್ಯತೆ ಪಡೆದಿದೆ

ವಿದ್ಯಾರ್ಥಿಗಳ ಉತ್ತೇಜನ ಸೇವಾ ಕೇಂದ್ರ

ಅಂತರ್‌ರಾಷ್ಟ್ರೀಯ ವಿದ್ಯಾರ್ಥಿಗಳ ಘಟಕ

ವಿದ್ಯಾರ್ಥಿಗಳ ಸೌಲಭ್ಯ ಸಮುಚ್ಛಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ–577 451

ಇ–ಮೇಲ್: kussse@gmail.com


## ವಿದೇಶಿ ವಿದ್ಯಾರ್ಥಿಗಳ ಪ್ರವೇಶ ಪ್ರಕ್ರಿಯೆ ಪರಿಷ್ಕೃತ ಮಾರ್ಗಸೂಚಿಗಳು :-

1) ವಿಶ್ವವಿದ್ಯಾಲಯದ ವ್ಯಾಪ್ತಿಯ ಘಟಕ/ನೇರ ಆಡಳಿತಕ್ಕೊಳಪಟ್ಟ/ಸಂಯೋಜಿತ ಕಾಲೇಜುಗಳಲ್ಲಿ ಸ್ನಾತಕ ಪದವಿ/ ಡಿಪ್ಲೋಮಾ/ಸರ್ಟಿಫಿಕೇಟ್ ಕೋರ್ಸ್ ಹಾಗೂ ಸ್ನಾತಕೋತ್ತರ ವಿಭಾಗಗಳಲ್ಲಿ ಸ್ನಾತಕೋತ್ತರ ಪದವಿ/ ಪಿಹೆಚ್.ಡಿ ಕೋರ್ಸ್‌ಗಳಿಗೆ ಪ್ರವೇಶ ಬಯಸುವ ವಿದೇಶಿ ವಿದ್ಯಾರ್ಥಿಗಳು ತಮ್ಮ ಪ್ರವೇಶಾರ್ಹತೆ ಬಗ್ಗೆ ಖಚಿತ ಪಡಿಸಿಕೊಳ್ಳಲು 'ಪ್ರವೇಶಾತಿ ಪರಾಮರ್ಶನ' (Eligiblity Assessment) ಮತ್ತು 'ಪ್ರವೇಶಾತಿ ಅರ್ಜಿ ನಮೂನೆ' (Admission Application Form) ಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್ (kuvempu.ac.in) ನಿಂದ ಡೌನ್‌ಲೋಡ್ ಮಾಡಿಕೊಳ್ಳಬೇಕು.

2) 'ಪ್ರವೇಶಾತಿ ಪರಾಮರ್ಶನ' ಮತ್ತು 'ಪ್ರವೇಶಾತಿ ಅರ್ಹತೆ' ನಿರ್ಧರಿಸುವ ಕಾರ್ಯಕ್ಕೆ ₹.1,000/- ಅಥವಾ 15 $ ಶುಲ್ಕವನ್ನು ನಿಗದಿಪಡಿಸಲಾಗಿದೆ. ಶುಲ್ಕವನ್ನು ವಿಶ್ವವಿದ್ಯಾಲಯದ ಜ್ಞಾನ ಸಹ್ಯಾದ್ರಿ ಆವರಣದಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ, ಶಾಖೆಯ ವಿಶ್ವವಿದ್ಯಾಲಯದ ಖಾತೆ ಸಂಖ್ಯೆ:54023036291, ಐ.ಎಫ್.ಎಸ್.ಸಿ ಕೋಡ್ SBIN0040759 ಗೆ ಹಣ ವರ್ಗಾವಣೆ ಮೂಲಕ ಪಾವತಿಸಬೇಕು.

ಶುಲ್ಕ ಪಾವತಿಯ ವಿವರವನ್ನು 'ಪ್ರವೇಶಾತಿ ಪರಾಮರ್ಶನ' ಮತ್ತು 'ಪ್ರವೇಶಾತಿ ಅರ್ಹತೆ' ಅರ್ಜಿಯಲ್ಲಿ ನಮೂದಿಸುವುದು. ಶುಲ್ಕ ಪಾವತಿಯ ಚಲನ್ ಮೂಲ ಪ್ರತಿಯನ್ನು ಅರ್ಜಿಯೊಂದಿಗೆ ಕಡ್ಡಾಯವಾಗಿ ಲಗತ್ತಿಸಬೇಕು. ಪೂರ್ಣವಾಗಿ ಭರ್ತಿಮಾಡಿದ ಅರ್ಜಿಯನ್ನು ನಿರ್ದೇಶಕರು, ಅಂತರ್‌ರಾಷ್ಟ್ರೀಯ ವಿದ್ಯಾರ್ಥಿಗಳ ಘಟಕ, ವಿದ್ಯಾರ್ಥಿಗಳ ಉತ್ತೇಜನ ಸೇವಾ ಕೇಂದ್ರ, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ ಇವರಿಗೆ ಸಲ್ಲಿಸಬೇಕು.

3) (ಎ) ಪ್ರವೇಶಾತಿ ಬಯಸುವ ವಿದೇಶಿ ವಿದ್ಯಾರ್ಥಿಗಳ ಪ್ರವಾಸಿ ಮತ್ತು ಶೈಕ್ಷಣಿಕ ದಾಖಲಾತಿಗಳನ್ನು ಅಂತರ್‌ರಾಷ್ಟ್ರೀಯ ವಿದ್ಯಾರ್ಥಿಗಳ ಘಟಕದ ನಿರ್ದೇಶಕರು ಪರಿಶೀಲಿಸಿ, 'ತಾತ್ಕಾಲಿಕ ಅನುಮತಿ ಪತ್ರ' ನೀಡಲು ಶೈಕ್ಷಣಿಕ ವಿಭಾಗದ ಉಪಕುಲಸಚಿವರಿಗೆ ಕಳುಹಿಸುವುದು.

ಅಂತರ್‌ರಾಷ್ಟ್ರೀಯ ವಿದ್ಯಾರ್ಥಿಗಳ ಘಟಕದ ನಿರ್ದೇಶಕರ ಶಿಫಾರಸ್ಸು/ ಅಭಿಪ್ರಾಯ ದನ್ವಯ ಶೈಕ್ಷಣಿಕ ವಿಭಾಗದ ಉಪಕುಲಸಚಿವರು ನಿಗದಿತ ಶುಲ್ಕ ಪಡೆದು, ವಿದೇಶಿ ವಿದ್ಯಾರ್ಥಿಗಳ ಪ್ರವೇಶಾತಿಗೆ 'ತಾತ್ಕಾಲಿಕ ಅನುಮತಿ ಪತ್ರ'ವನ್ನು ನೀಡುವುದು ಹಾಗೂ ಅನುಮತಿ ಪತ್ರದ ಯಥಾ ಪ್ರತಿಯನ್ನು ಅಂತರ್‌ರಾಷ್ಟ್ರೀಯ ವಿದ್ಯಾರ್ಥಿಗಳ ಘಟಕಕ್ಕೆ ಸಲ್ಲಿಸುವುದು.

ವಿದೇಶಿ ವಿದ್ಯಾರ್ಥಿಗಳ ಪ್ರವೇಶಾರ್ಹತೆಯ ಬಗ್ಗೆ ಸಂದೇಹವಿದ್ದಲ್ಲಿ, ಅಂತಹ ಪ್ರಕರಣಗಳನ್ನು ನಿರ್ಧರಿಸಲು ಸಂಬಂಧಿಸಿದ ಡೀನರು, ಶಾಲಾ ನಿರ್ದೇಶಕರು ಮತ್ತು ವಿಭಾಗದ ಅಧ್ಯಕ್ಷರನ್ನು ಒಳಕೊಂಡ 'ಇಕ್ವಲೆನ್ಸ್ ಸಮಿತಿ'ಗೆ ಶೈಕ್ಷಣಿಕ ವಿಭಾಗದಿಂದ ಮಂಡಿಸುವುದು.

ಇಕ್ವಲೆನ್ಸ್ ಸಮಿತಿಯ ಶಿಫಾರಸ್ಸಿನನ್ವಯ ತೆಗೆದುಕೊಂಡ ಅಂತಿಮ ನಿರ್ಣಯವನ್ನು ವಿದೇಶಿ ವಿದ್ಯಾರ್ಥಿಗೆ ಹಾಗೂ ಅಂತರ್‌ರಾಷ್ಟ್ರೀಯ ವಿದ್ಯಾರ್ಥಿಗಳ ಘಟಕಕ್ಕೆ, ಶೈಕ್ಷಣಿಕ ವಿಭಾಗವು ಮಾಹಿತಿ ನೀಡುವುದು.

(ಬಿ) ಪ್ರವೇಶಾತಿ ಬಯಸುವ ವಿದೇಶಿ ಪಿಹೆಚ್.ಡಿ ಸಂಶೋಧನಾರ್ಥಿಗಳ ಪ್ರವಾಸಿ ಮತ್ತು ಶೈಕ್ಷಣಿಕ ದಾಖಲಾತಿಗಳನ್ನು ಅಂತರ್‌ರಾಷ್ಟ್ರೀಯ ವಿದ್ಯಾರ್ಥಿಗಳ ಘಟಕದ ನಿರ್ದೇಶಕರು ಪರಿಶೀಲಿಸಿ, ಇಕ್ವಲೆನ್ಸ್ ಸಮಿತಿಯ ಮುಂದೆ ಮಂಡಿಸಲು ಶೈಕ್ಷಣಿಕ ವಿಭಾಗದ ಉಪಕುಲಸಚಿವರಿಗೆ ಕಳುಹಿಸುವುದು.

ವಿದೇಶಿ ಸಂಶೋಧನಾರ್ಥಿಯು ಪಿಹೆಚ್.ಡಿ ಗೆ ಪ್ರವೇಶ ಬಯಸುವ ವಿಭಾಗದಲ್ಲಿ ಸ್ಥಾನ ಖಾಲಿಯಿರುವ ಬಗ್ಗೆ ವಿಭಾಗದ ಅಧ್ಯಕ್ಷರ ಅಭಿಪ್ರಾಯ ಮತ್ತು ಮಾರ್ಗದರ್ಶಕರ ಒಪ್ಪಿಗೆ ಪತ್ರ ಪಡೆದು, ಸಂಬಂಧಿಸಿದ ಡೀನರು, ಶಾಲಾ ನಿರ್ದೇಶಕರು ಮತ್ತು ವಿಭಾಗದ ಅಧ್ಯಕ್ಷರನ್ನು ಒಳಕೊಂಡ 'ಇಕ್ವಲೆನ್ಸ್ ಸಮಿತಿ'ಗೆ ಶೈಕ್ಷಣಿಕ ವಿಭಾಗದಿಂದ ಮಂಡಿಸುವುದು.

ಪು.ತಿ.ನೋ

ಇಕ್ವಲೆನ್ಸ್ ಸಮಿತಿಯ ಶಿಫಾರಸ್ಸಿನನ್ವಯ ತೆಗೆದುಕೊಂಡ ಅಂತಿಮ ನಿರ್ಣಯವನ್ನು ವಿದೇಶಿ ಪಿಹೆಚ್.ಡಿ ಸಂಶೋಧನಾರ್ಥಿಗೆ ಹಾಗೂ ಅಂತರ್‌ರಾಷ್ಟ್ರೀಯ ವಿದ್ಯಾರ್ಥಿಗಳ ಘಟಕಕ್ಕೆ, ಶೈಕ್ಷಣಿಕ ವಿಭಾಗವು ಮಾಹಿತಿ ನೀಡುವುದು.

4) ಕ್ರಮ ಸಂಖ್ಯೆ (3) (ಎ) ಮತ್ತು (ಬಿ) ನಲ್ಲಿ ಪ್ರಸ್ತಾಪಿಸಲಾದ ಅಭ್ಯರ್ಥಿಗಳು ಪ್ರವೇಶ ಅರ್ಹತೆ ಹೊಂದ್ದಿದಲ್ಲಿ, ವಿದೇಶಿ ವಿದ್ಯಾರ್ಥಿಗಳಿಂದ ವಿಶ್ವವಿದ್ಯಾಲಯದ ಖಾತೆಗೆ ಕೆಳಕಂಡಂತೆ ಶುಲ್ಕವನ್ನು ಪಾವತಿಸಿಕೊಂಡು ಶೈಕ್ಷಣಿಕ ವಿಭಾಗದಿಂದ **'ತಾತ್ಕಾಲಿಕ ಅನುಮತಿ ಪತ್ರ'** (Provisional Permission Letter) ನೀಡುವುದು.

(ಎ) ಯು.ಜಿ. ಡಿಪ್ಲೋಮಾ/ಸರ್ಟಿಫಿಕೇಟ್ ಕೋರ್ಸ್ ₹. 7,000/- ಅಥವಾ 104 $

(ಬಿ) ಪಿ.ಜಿ ಮತ್ತು ಪಿಹೆಚ್.ಡಿ ಕೋರ್ಸ್ ₹. 7,000/- ಅಥವಾ 104 $

ಪ್ರವೇಶ ಅರ್ಹತೆ ಹೊಂದಿರದ ವಿದೇಶಿ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ವಿಭಾಗದಿಂದ ಈ ಬಗ್ಗೆ ಉಚಿತ ಮಾಹಿತಿ ನೀಡುವುದು ಹಾಗೂ ಅಂತರ್‌ರಾಷ್ಟ್ರೀಯ ವಿದ್ಯಾರ್ಥಿಗಳ ಘಟಕಕ್ಕೆ ಯಥಾ ಪ್ರತಿಯನ್ನು ಸಲ್ಲಿಸುವುದು.

5) ವಿಶ್ವವಿದ್ಯಾಲಯದಿಂದ **'ತಾತ್ಕಾಲಿಕ ಅನುಮತಿ ಪತ್ರ'** (Provisional Permission Letter) ಪಡೆದ ವಿದೇಶಿ ವಿದ್ಯಾರ್ಥಿಗಳು/ ಸಂಶೋಧನಾರ್ಥಿಗಳು, **'ಶಿಕ್ಷಣ ವೀಸಾ'(Education Visa)/ 'ಸಂಶೋಧನಾ ವೀಸಾ' (Research Visa)** ಪಡೆಯಲು ತಮ್ಮ ದೇಶದಲ್ಲಿರುವ ಭಾರತದ ರಾಯಭಾರ ಕಛೇರಿಯನ್ನು ಸಂಪರ್ಕಿಸುವುದು.

6) 'ಶಿಕ್ಷಣ ವೀಸಾ' / 'ಸಂಶೋಧನಾ ವೀಸಾ' ಪಡೆದು ಭಾರತಕ್ಕೆ ಆಗಮಿಸಿದ ವಿದೇಶಿ ವಿದ್ಯಾರ್ಥಿಗಳು / ಸಂಶೋಧನಾರ್ಥಿಗಳು ಮೊದಲು ಅಂತರ್‌ರಾಷ್ಟ್ರೀಯ ವಿದ್ಯಾರ್ಥಿಗಳ ಘಟಕದಲ್ಲಿ ವರದಿ ಮಾಡಿಕೊಂಡು ನಂತರ ಕೆಳಕಂಡ ನಿಗದಿತ ಶುಲ್ಕ ಪಾವತಿಸಿ ಸಂಬಂಧಿಸಿದ ಕಾಲೇಜು/ ಸ್ನಾತಕೋತ್ತರ ವಿಭಾಗದಲ್ಲಿ ತಾತ್ಕಾಲಿಕ ಪ್ರವೇಶವನ್ನು ಪಡೆಯುವುದು.

1) ಸ್ನಾತಕೋತ್ತರ ಪದವಿ/ ಪಿಹೆಚ್.ಡಿ ಕೋರ್ಸ್ : ₹.40,000/- ಅಥವಾ 600 $ } ಪ್ರತಿ ವರ್ಷಕ್ಕೆ

2) ಸ್ನಾತಕ ಪದವಿ/ಡಿಪ್ಲೋಮಾ/ಸರ್ಟಿಫಿಕೇಟ್ ಕೋರ್ಸ್:₹.10,000/-ಅಥವಾ 150 $ } ಪ್ರತಿ ವರ್ಷಕ್ಕೆ

ಮತ್ತು ಇತರೆ ನಿಗದಿತ ಶುಲ್ಕಗಳು

7) ಪ್ರವೇಶ ಪ್ರಕ್ರಿಯೆ ಮುಗಿದ ನಂತರ ವಿದೇಶಿ ವಿದ್ಯಾರ್ಥಿಗಳು / ಸಂಶೋಧನಾರ್ಥಿಗಳು ಸಂಬಂಧಿಸಿದ ಕಾಲೇಜು/ ಸ್ನಾತಕೋತ್ತರ ವಿಭಾಗದಿಂದ ಅಧ್ಯಯನ ಪ್ರಮಾಣ ಪತ್ರ (Study Certificate) ವನ್ನು ಪಡೆದು FRRO ಗೆ ಆನ್‌ಲೈನ್ ಮೂಲಕ ನೋಂದಣಿ ಮಾಡಿಸಿಕೊಳ್ಳಲು ಮತ್ತು ನಮೂನೆ 'ಎಸ್' (S) ಹಾಗೂ 'ಬೋನಾಫೈಡ್ ಪ್ರಮಾಣ ಪತ್ರ' (Bonafide certificate) ವನ್ನು ಪಡೆಯಲು ಅಂತರ್‌ರಾಷ್ಟ್ರೀಯ ವಿದ್ಯಾರ್ಥಿಗಳ ಘಟಕಕ್ಕೆ ಮನವಿ ಸಲ್ಲಿಸುವುದು. ಸದರಿ ದಾಖಲೆಗಳು FRRO/ ಪೋಲಿಸ್ ಇಲಾಖೆಯಿಂದ ವಾಸಸ್ಥಳದ ಅನುಮತಿ ಪತ್ರವನ್ನು (Stay visa) ಪಡೆಯಲು ಅಗತ್ಯವಾಗಿರುತ್ತದೆ.

ವಿದೇಶಿ ವಿದ್ಯಾರ್ಥಿ/ ಸಂಶೋಧನಾರ್ಥಿ ವಿಶ್ವವಿದ್ಯಾಲಯ/ ಕಾಲೇಜಿನ ವಿದ್ಯಾರ್ಥಿನಿಲಯದಲ್ಲಿ ವಾಸವಾಗಿದ್ದಲ್ಲಿ ಅಂತರ್‌ರಾಷ್ಟ್ರೀಯ ವಿದ್ಯಾರ್ಥಿಗಳ ಘಟಕದಿಂದ ನಮೂನೆ 'ಸಿ' (C) ಪಡೆಯುವುದು. ವಿದೇಶಿ ವಿದ್ಯಾರ್ಥಿಯು ವಾಸಸ್ಥಳದ ಅನುಮತಿ ಪತ್ರವನ್ನು (Stay visa) ಪಡೆದ ನಂತರ ಅದರ ಒಂದು ಪ್ರತಿಯನ್ನು ಅಂತರ್‌ರಾಷ್ಟ್ರೀಯ ವಿದ್ಯಾರ್ಥಿಗಳ ಘಟಕಕ್ಕೆ ಸಲ್ಲಿಸುವುದು.

8) ಇಂಗ್ಲೀಷ್ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರದ ವಿದೇಶಿ ವಿದ್ಯಾರ್ಥಿಗಳಿಗೆ ಪ್ರವೇಶಾತಿ ನಂತರದಲ್ಲಿ ಕುವೆಂಪು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಉತ್ತೇಜನ ಸೇವಾ ಕೇಂದ್ರದಿಂದ 'Functional English' ತರಬೇತಿ ಕಾರ್ಯಕ್ರಮವನ್ನು ಏರ್ಪಡಿಸಲಾಗುವುದು.

9) ನಿರ್ದೇಶಕರು ಅಂತರ್‌ರಾಷ್ಟ್ರೀಯ ವಿದ್ಯಾರ್ಥಿಗಳ ಘಟಕ ಇವರು ಪೋಲಿಸ್ ಇಲಾಖೆಯ ಸಹಯೋಗದೊಂದಿಗೆ ವಿದೇಶಿ ವಿದ್ಯಾರ್ಥಿಗಳಿಗೆ ಈ ನೆಲದ ಕಾನೂನಿನ (Law of the Land) ಬಗ್ಗೆ ಅರಿವು ಮೂಡಿಸಲು ಕಾರ್ಯಕಮಗಳನ್ನು ನಡೆಸುವುದು.

10) <u>ನಮೂನೆಗಳು:</u>

ಎ) ವಿದೇಶಿ ವಿದ್ಯಾರ್ಥಿಗಳ ಅರ್ಹತೆ ಮೌಲ್ಯಮಾಪನ ನಮೂನೆ (Eligibility Assessment Form)

ಬಿ) ವಿದೇಶಿ ವಿದ್ಯಾರ್ಥಿಗಳ ಪ್ರವೇಶಾತಿ ಅರ್ಜಿ ನಮೂನೆ (Foreign Student Admission Application Form)

ಕಡತ ಕುಲಪತಿಯವರಿಂದ ಅನುಮೋದಿಸಲ್ಪಟ್ಟಿದೆ.

6/9

ನಿರ್ದೇಶಕರು
ಅಂತರ್‌ರಾಷ್ಟ್ರೀಯ ವಿದ್ಯಾರ್ಥಿಗಳ ಘಟಕ
ಕುವೆಂಪು ವಿಶ್ವವಿದ್ಯಾಲಯ,
ಶಂಕರಘಟ್ಟ-577 451.